**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 8/2023**

| | | |
|---|---|---|
| **ಸಾಕ್ಷಿದಾರನ ಹೆಸರು** : ದೇವದಾಸ್ | | ಪಿ.ಡಬ್ಲ್ಯೂ– 17 |
| **ತಂದೆಯ ಹೆಸರು** : ನಂಜಶೆಟ್ಟಿ | | ಸಿ.ಡಬ್ಲ್ಯೂ– 34 |
| **ವಯಸ್ಸು** : 65 ವರ್ಷ | | |
| **ಉದ್ಯೋಗ** : ನಿವೃತ ಎ.ಎಸ್.ಐ | | |
| **ವಾಸಸ್ಥಳ** : ಮೈಸೂರು. | | |

**ಸಾಕ್ಷಿಯನ್ನು ಈ ದಿನ ದಿಃ26.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನಾನು 2016 ರಿಂದ 2021 ರವರೆಗೆ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ– 19.01.2020 ರಂದು ನನಗೆ ಹಗಲು ಕರ್ತವ್ಯ ಇದ್ದು, ಮದ್ಯಾಹ್ನ 2 ಗಂಟೆಯಿಂದ ರಾತ್ರಿ 9 ಗಂಟೆಯ ಕರ್ತವ್ಯಕ್ಕೆ ನೇಮಿಸಲಾಗಿತ್ತು. ನಾನು ಕರ್ತವ್ಯದಲ್ಲಿದ್ದಾಗ ಮದ್ಯಾಹ್ನ 2.05 ಗಂಟೆಗೆ ಕೆ.ಆರ್. ಆಸ್ಪತ್ರೆಯ ಒಪಿ ಯಿಂದ ನನಗೆ ಪೋನ್ ಕರೆ ಬಂದಿದ್ದು, ಅದರಲ್ಲಿ ಡೆತ್ ಮೆಮೋ ಇರುವ ಬಗ್ಗೆ ತಿಳಿಸಿರುತ್ತಾರೆ. ಆಗ ಚಾ.ಸಾಃ30 ರವರನ್ನು ಉಸ್ತುವಾರಿಯಾಗಿ ನೇಮಿಸಿ, ನಾನು ಪೊಲೀಸ್ ಠಾಣೆಯಿಂದ ಕೆ.ಆರ್. ಆಸ್ಪತ್ರೆಯ ಒಪಿಗೆ ಬೇಟಿ ನೀಡಿರುತ್ತೇನೆ. ನಾನು ಅಲ್ಲಿ ಡೆತ್ ಮೆಮೋವನ್ನು ಪಡೆದುಕೊಂಡು ಠಾಣೆಗೆ ವಾಪಸ್ಸು ಬಂದು ಪಿಐ ರವರಿಗೆ ವರದಿ ಸಲ್ಲಿಸಿರುತ್ತೇನೆ. ಸದರಿ ಡೆತ್ ಮೊಮೋವನ್ನು

ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಡೆತ್ ಮೆಮೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–26 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**